
INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 14 | ISSUE - 12 | JANUARY – 2025

# ಕನ್ನಡ ಸಾಹಿತ್ಯ : ಮಹಿಳಾ ಪ್ರಜ್ಞೆ

ಡಾ.ಗೀತಾಂಜಲಿ ಎಂ. ಕುರುಡಗಿ
ಸಂಶೋಧಕರು



ಕನ್ನಡ ಸಾಹಿತ್ಯದ (೧೫೦೦) ಸಾವಿರದ ಐನೂರು ವರ್ಷಗಳ ಅವಧಿಯಲ್ಲಿ ಮಹಿಳಾ ಸಾಹಿತ್ಯ, ಮಹಿಳಾ ಪ್ರಜ್ಞೆ ಎಂಬುದು ೨೦ನೇ ಶತಮಾನಕ್ಕೆ ಕಾಲಿಡುವವರೆಗೂ ಗುರುತಿಸಬಹುದಾದಂಥಹದು ಹೆಚ್ಚು ಕಂಡುಬರುವುದಿಲ್ಲ. ಹನ್ನೆರಡನೆಯ ಶತಮಾನದಲ್ಲಿ ಹೆಣ್ಣು ಮಕ್ಕಳ ಒಂದಿಷ್ಟು ದನಿಯನ್ನು ಬಿಟ್ಟರೆ, ಈ ಧೀರ್ಘಾವಧಿಯಲ್ಲಿ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು 'ಮಹಾಮೌನಕ್ಕೆ' ಬಲಿಯಾಗಿದ್ದಾರೆ.

ಮಹಿಳಾ ಅನಾದಿ ಕಾಲದಿಂದ ಅಕ್ಷರ, ಆಸ್ತಿ, ಅಧಿಕಾರ ಹಾಗೂ ಮುಖ್ಯವಾಗಿ ಸೃಜನಶೀಲತೆಗೆ ಅವಶ್ಯವಾದ ವಿರಾಮದಿಂದ ವಂಚಿತರಾಗಿ ಕತ್ತಲುಕೋಣೆಗೆ ಬಂಧಿಯಾಗಿ ಉಳಿಯುವ ಕರಾಳ ಪ್ರಸಂಗಗಳ ಧೀರ್ಘ ಚರಿತ್ರೆ ನಮ್ಮದು. ಅಷ್ಟೇ ಅಲ್ಲಜಾತಿ–ವರ್ಗ–ಲಿಂಗ ಮೂರು ನೆಲೆಗಳಿಂದ ಹತ್ತಿಕಲ್ಪಟ್ಟವರು. ಪ್ರಕೃತಿಗೆ ಹತ್ತಿರವಾಗಿದುದ ಬದುಕಿ ಮನುಷ್ಯ–ಪ್ರಕೃತಿ ನಡುವಣ ಸಮತೋಲನ ಕಾಯ್ದವರು. ಶ್ರಮಕ್ಕೆ ತಮ್ಮನ್ನೆ ತೆತ್ತುಕೊಂಡವರು. ಎಲ್ಲ ಸೇವಾ ವಲಯಗಳನ್ನು ಪ್ರಧಾನವಾಗಿ ಆದರಿಸಿ ಪ್ರತಿಕುಟುಂಬ ಮತ್ತು ಸಮಾಜದ ಅಡಿಪಾಯವಾಗಿರುವವರು. ಸಮಾಜ ತಮ್ಮನ್ನು ನಡೆಸಿಕೊಂಡರೂ ಅಖಂಡ ಜೀವನೋತ್ಸಾಹ ಮತ್ತು ಧೈರ್ಯವನ್ನು ಮೈಗೂಡಿಸಿಕೊಂಡವರು. ಹಾಗಾಗಿ ಉಳಿದೆಲ್ಲ. ಹೆಣ್ಮನಗಳಿಗಿಂತ ವಸ್ತುನಿಷ್ಠವಾಗಿ, ವಿಮರ್ಶಾತ್ಮಕವಾಗಿ ಯೋಚಿಸ ಬಲ್ಲವರು ಇವಳು ಭಾರತದ ಮೊಟ್ಟ ಮೊದಲು ಶೋಷಣೆಗೆ ಒಳಪಟ್ಟವಳು ಎಂಬುದು ಚಾರಿತ್ರಿಕ ಸತ್ಯ.

ಭಾರತದಲ್ಲಿ ಪ್ರಾಚೀನ ಕಾಲದಿಂದಲೇ ವಿದೇಶಿಯರ ದಾಳಿಗಳ, ಆಕ್ರಮಣಗಳ ಫಲವಾಗಿ ಜನಜೀವನ ಅಸ್ತವ್ಯಸ್ತಗೊಂಡು ಮಹಿಳೆಯರ ರಕ್ಷಣೆ ಕಠಿಣವಾಗಿ ಅವರ ಬಾಳು ಕಟ್ಟುಪಾಡುಗಳಿಗೆ ಒಳಗಾಗಬೇಕಾಯಿತು. ಜನರಲ್ಲಿ ಮತಮೌಢ್ಯತೆ ಅಧಿಕವಾಗಿ ಧಾರ್ಮಿಕತೆಯ ಹೆಸರಿನಲ್ಲಿ ಅರ್ಥ ವಿಲ್ಲದ ಆಚರಣೆಗಳು, ಮೂಢನಂಬಿಕೆಗಳು ಹೆಚ್ಚಿದವು. ಈ ಅವಧಿಯಲ್ಲಿ ಬಂದ ಭಕ್ತಿ ಚಳುವಳಿಗಳ ಫಲವಾಗಿ ಹಲವಾರು ಮಹಿಳೆಯರು ಭಾರತೀಯ ಭಾಷೆಗಳಲ್ಲಿ ಕಾವ್ಯಗಳನ್ನು, ಕವಿತೆ, ಹಾಡುಗಳನ್ನು ಬರೆದು ಪ್ರಸಿದ್ಧರಾದರು. ಹಾಗೆ ಅನೇಕ ನಾಯಕರ ಹೋರಾಟದ ಫಲವಾಗಿ ಲಾರ್ಡ್‌ಬೆಂಟಿಂಕನ ಮುಂದಾಳತ್ವದಲ್ಲಿ ೪ನೇ ಡಿಸಿಂಬರ್ ೧೮೨೯ 'ಸತಿಸಹಗಮನ ನಿಷೇಧ' ಜಾರಿಗೊಳಿಸಲಾಯಿತು. ಆ ಕಾಲದಲ್ಲಿ ವಿಪರೀತವಾಗಿದ್ದ ಬಹುಪತ್ನಿ ವಿವಾಹ, ಬಾಲ್ಯವಿವಾಹ ಪದ್ಧತಿಗಳನ್ನು ನಿರ್ಮೂಲನಗೊಳಿಸಿ ವಿಧವಾ ವಿವಾಹ ಕಾನೂನು ಬದ್ಧವಾಗಿಸಲು ಹೋರಾಡಿ ಯಶಸ್ವಿಯಾದರು. ಮಹಿಳೆಯರ ಪರವಾದ ಮಸೂದೆಗಳು ಜಾರಿಗೆ ಬಂದರೂ ಬರಿಯಕಾಗದದ ಮೇಲೆ ಉಳಿದವೇ ಹೊರತು ಮಹಿಳೆಯರ ಶೀಷಣೆ ನಿಲ್ಲಲಿಲ್ಲ. ಇಪ್ಪತ್ತನೆಯ ಶತಮಾನದ ಆರಂಭ ಹಾಗೂ ಅದಕ್ಕೆ ಸ್ವಲ್ಪ ಮುಂಚೆ ಆಗುತ್ತ ಬಂದ ಸಾಹಿತ್ಯ ಸೃಷ್ಠಿ ಕ್ರಮೇಣ ಮಧ್ಯಯುಗೀನ ಭಕ್ತಿ ಆಂದೋಳನದಿಂದ ಹಿಂದೆ ಸರಿದು ಸಮಾಜಮುಖಿಯಾಗಿ ಸಮಾಜದ ಶ್ರೇಯಸ್ಸಿನತ್ತ ಹೊರಳಿದ್ದು ಒಂದು ವಿಶೇಷ. ಅದಕ್ಕೆ ಕಾರಣ ದೇಶದಲ್ಲಿದ್ದ ರಾಜಕೀಯ ಪರಿಸ್ಥಿತಿ. ಸಂಪ್ರದಾಯಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುತ್ತಿದ್ದ ದುಷ್ಟ ಪದ್ಧತಿಗಳ ಅತಿರೇಕ. ಜೊತೆಗೆ ಅಂದಿನ ದಿನಗಳಲ್ಲಿ ಸಮಸ್ತ ಭಾರತದ ಸವಾಲಾಗಿದ್ದ ಸ್ವಾತಂತ್ರ್ಯಾಕಾಂಕ್ಷೆಯ ಅಲೆ, ಸೊಕ್ಕು ಸಂವೇದಿಗಳಾದ ಕವಿಗಳನ್ನು ಸಾಹಿತಿಗಳನ್ನು ಹೋರಾಟಕ್ಕೆ ಸಜ್ಜುಗೊಳಿಸಿತು. ಈ ಸಂದರ್ಭದಲ್ಲಿ ಸಮಾಜ ಸುಧಾರಕರ ಕೆಲವು ಪ್ರಯತ್ನಗಳ ಸಾಹಿತಿಗಳನ್ನು ಪ್ರಭಾವಿಸಿದವು.

ಈ ಹಿನ್ನೆಲೆಯಲ್ಲಿ ಭಾರತದ ಇತರ ಭಾಷೆಗಳಂತೆ ಕನ್ನಡ ಸಾಹಿತ್ಯವೂ ರೂಪು–ರೀತಿಗಳೆರಡರಲ್ಲಿ ಒಂದು ಕ್ರಾಂತಿಕಾರಕ ಬದಲಾವಣೆ ಹೊಂದಿತು. ಕೇವಲ ಆಧ್ಯಾತ್ಮಿಕ–ಧಾರ್ಮಿಕ ನೆಲೆಯಲ್ಲಿ ಅದರಲ್ಲೂ ಕಾವ್ಯ ಪ್ರಕಾರದಲ್ಲಿ ರಚನೆಯಾಗುತ್ತಿದ್ದು ಕನ್ನಡ ಸಾಹಿತ್ಯ ಕಾಲಕ್ರಮೇಣ ಹೊಸ ದೃಷ್ಠಿ, ಚಿಂತನೆ, ಆದರ್ಶಗಳನ್ನು ಮೈಗೂಡಿಸಿಕೊಂಡು ಅರಳತೊಡಗಿತು. ಅಂದಿನ ಸಾಹಿತಿಗಳಿಗೆ ದೇಶ

ಪ್ರೇಮ, ದೇಶ ಭಕ್ತಿ, ಸ್ವಾತಂತ್ರ್ಯಾಕಾಂಕ್ಷೆ, ಕುಲ–ಮತ ಭೇದಗಳ ನಿರ್ಮೂಲನೆ, ಇದರೊಂದಿಗೆ ಸ್ತ್ರೀಪರ ಕಾಳಜಿಗಳು ಸಾಹಿತ್ಯರಚನೆಗೆ ಪ್ರಮುಖ ವಸ್ತುಗಳಾದವು.

ಈ ಅವಧಿಯಲ್ಲಾದ ಸ್ತ್ರೀ ಸುಧಾರಣಾ ಚಳುವಳಿ ಹಾಗೂ ಇಂಗ್ಲೀಷರು ಸ್ಥಾಪಿಸಿ ಶಾಲೆಗಳಿಂದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆತು ಬಹಳ ಹೆಣ್ಣು ಮಕ್ಕಳು ಶಾಲೆಗೆ ಹೋಗಿ ವಿದ್ಯಾವಂತರಾದರು. ಇದರಲ್ಲಿ ಕೆಲವರು ಬರೆಯತೊಡಗಿದರು. ಈ ಲೇಖಕಿಯರಲ್ಲಿ ಎರಡು ವರ್ಗದವರನ್ನು ಕಾಣುತ್ತೇವೆ.

ಪೌರಾಣಿಕ ಆದರ್ಶಗಳನ್ನು ಪ್ರತಿಬಿಂಬಿಸುವ ಭಾರತೀಯ ನಾರಿಯಚಿತ್ರಣ ಹಾಗೂ ಅವಳ ಧ್ಯೇಯ ಕರ್ತವ್ಯಗಳ ಕುರಿತ ಬೋಧನೆ. ಇನ್ನೊಂದು ಕಡೆ ಸಂಪ್ರದಾಯ ಹೆಸರಿನಲ್ಲಿ ಮಹಿಳೆಯರಿಗಾಗುತ್ತಿದ್ದ ಅನ್ಯಾಯಗಳ ವಿರುದ್ಧ ದನಿಯ ರಚನೆಗಳು.

ಈ ಅವಧಿಯಲ್ಲಿ ಬರೆದ ನಂಜನಗೂಡಿನ ತಿರುಮಲಾಂಬೂ ಹಾಗೂ ಆರ್.ಕಲ್ಯಾಣಮ್ಮರಿಂದ ಹಿಡಿದು ಶ್ಯಾಮಲಾ ಬೆಳಗಾವ್‌ಕರ್, ಬೆಳಗೆರೆ ಜಾನಕಮ್ಮ, ಕೊಡಗಿನ ಗೌರಮ್ಮ ನಂತರ ಬಂದ ತಿರುಮಲ ರಾಜಮ್ಮ ಇವರು ಸ್ವಾತಂತ್ರ್ಯ ಸಮಾಜದ ಕುರಿತಾಗಿ ತಮ್ಮ ನಿರೀಕ್ಷೆಯನ್ನು ಪ್ರಕಟಿಸುತ್ತ ಅಂದು ಪ್ರಚಲಿತದಲ್ಲಿದ್ದ ನಂಬಿಕೆ, ಮೌಲ್ಯಗಳ ಬಗ್ಗೆ ಚಿಕಿತ್ಸಕ ದೃಷ್ಟಿಯಿಂದ ನೋಡಿ ಬಾಲ್ಯ ವಿವಾಹದಂತಹ ಸಮಸ್ಯೆಗಳ ಕುರಿತಾಗಿದನ ಎತ್ತಿದರು. ಅಂತಹ ಸಮಸ್ಯೆಗಳನ್ನು ಇಟ್ಟುಕೊಂಡು ಕಥೆ, ಕಾದಂಬರಿ, ನಾಟಕ, ಕಾವ್ಯಗಳನ್ನು ಬರೆದರು.೨೫ ವರ್ಷಗಳ ಅವಧಿಯಲ್ಲಿ (೧೯೫೦–೭೫) ಹೊಸ ತಲೆಮಾರಿನ ಲೇಖಕಿಯರುಅಧಿಕ ಸಂಖ್ಯೆಯಲ್ಲಿ (೧೫೦ ಕ್ಕೂ ಹೆಚ್ಚು) ಕಾಣಿಸಿಕೊಂಡರು.ಅವರಲ್ಲಿತ್ರಿವೇಣಿ, ವಾಣಿ, ಅನುಪಮ ನಿರಂಜನ, ಎಂ.ಕೆ.ಇಂದಿರಾ, ಆರ್ಯಾಂಭ ಪಟ್ಟಂಭಿ, ಶ್ಯಾಮಲಾದೇವಿ ಬೆಳಗಾಂವಕರ, ಸರಸ್ವತಿಬಾಯಿ ರಜವಾತೆ, ಶಾಂತಾದೇವಿ ಮಾಳವಾಡ, ಸರಸ್ವತಿದೇವಿ ಗೌಡರ ಕಾತ್ಯಯನಿ ಗೀತಾಕುಲಕರ್ಣಿ, ಎಚ್ ಸಾವಿತ್ರಮ್ಮ, ಶಾಂತಾದೇವಿ ಕಣವಿ, ರಾಜಲಕ್ಷ್ಮಿಎನ್. ರಾವ್, ವೀಣಾ ಶಾಂತೇಶ್ವರ ಮೊದಲಾದವರು ಪ್ರಮುಖರು ಇವರಲ್ಲಿ ಬಹಳಷ್ಟು ಮಹಿಳೆಯರು ಸ್ತ್ರೀವಾದಿ ಚಳುವಳಿಯ ಬಿಸಿ ತಾಗದೆ ಸಾಹಿತ್ಯ ರಚಿಸಿದ್ದಾರೆ. ಅವರು ಸಂಪ್ರದಾಯಸ್ಥರೆ ವೀಣಾ ಶಾಂತೇಶ್ವರಂಥವರು ಸ್ತ್ರೀವಾದಿ ನೆಲೆಯಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿದರು. ನವ್ಯ ಮತ್ತು ಸ್ತ್ರೀವಾದಿ ಚಿಂತನೆಗಳಿಗೆ ತಂದುಕೊಂಡ ಅವರು ಸ್ತ್ರೀಪರಧ್ವನಿ ಎತ್ತಿದ್ದಾರೆ. ಅವರ ಸ್ತ್ರೀಪರತೆ ಒಮ್ಮೆಮ್ಮೆ ಪುರುಷ ದ್ವೇಷಕ್ಕೂತಿರುಗುವಂತೆ ತೋರುತ್ತದೆ. ಇಷ್ಟೊಂದು ಸಂಖ್ಯೆಯಲ್ಲಿ ಮಹಿಳೆಯರು ಲೆಕ್ಕಣಿಕೆ ಹಿಡಿದು ತಮ್ಮ ಸಂವೇದನೆಗಳಿಗೆ ಅಭಿವ್ಯಕ್ತಿ ಕೊಟ್ಟದ್ದೇ ಒಂದು ಮಹಾಕ್ರಾಂತಿ, ಮಹತ್ ಸಾಧನೆಯಾಗಿದೆ. ನವೋದಯ, ನವ್ಯ, ಪ್ರಗತಿಶೀಲ, ದಲಿತ–ಬಂಡಾಯ ಚಳುವಳಿಕೆಯೊಂದಿಗೆ ಬೆಳೆದು ಸ್ತ್ರೀವಾದಿ ಚಳುವಳಿಯವರೆಗೆ ನಡೆದುಬಂದದ್ದು ಚರಿತ್ರಾರ್ಹ ಸಂಗತಿ. ಅಷ್ಟೇ ಅಲ್ಲ ಈ ಕಾಲದ ಒಂದು ಮುಸ್ಲಿಂ ಸಂವೇದನೆಯ ಕುರಿತ ರಚನೆಗಳು ಕೂಡ ಒಂದು ಪ್ರಮುಖ ಸ್ಥಾನವನ್ನಲಂಕರಿಸುತ್ತವೆ. ಮುಸ್ಲಿಂ ಸಮುದಾಯದ ಸಮಾಜದ ಕಟ್ಟುಪಾಡುಗಳಿಂದ ನಲುಗಿ ಹೋಗುತ್ತಿರುವ ಸ್ತ್ರೀಸಮುದಾಯದ ಕುರಿತು ತೀವ್ರವಾದ ಕಾಳಜಿಯಿಂದ ಅಭಿವ್ಯಕ್ತಿನದರಿನರಲ್ಲಿ ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್, ಸಬಿಹ, ರಜಿಯಾ ಮುಂತಾದವರು ಪ್ರಮುಖರಾಗಿ ಕಾಣುತ್ತಾರೆ. ಇವರು ಬರೆದಕಥೆ, ಕಾದಂಬರಿ, ಕವನಗಳಲ್ಲಿ ಮತದ ಕಟ್ಟುಪಾಡಿಗೆ ಒಳಗಾಗಿ ಪರದೆಯ ಮುಸುಕಿನೊಳಗೆ ಬೆಂದು ಹೋಗುತ್ತಿರುವ ದುಃಖನಿಯರ, ದುರ್ಭರ ಜೀವನ ಕಣ್ಣಿಗೆ ಕಟ್ಟುತ್ತದೆ.

ಮುಖ್ಯವಾಗಿ ಮಹಿಳಾ ಪ್ರಜ್ಞೆ ಎಲ್ಲ ಮಹಿಳೆಯರ ಸಮಾನತೆ ಸ್ವಾತಂತ್ರ ಸ್ವಾಯತ್ತತೆಯನ್ನು ಪ್ರತಿಪಾದಿಸುತ್ತದೆ. ಎಲ್ಲ ವರ್ಗ, ಜಾತಿ, ಹಿನ್ನೆಲೆ ಉದ್ಯೋಗಸ್ಥ ಮಹಿಳೆಯರ ಕುರಿತು ಮಾತನಾಡುತ್ತದೆ. ಅದುವೇ ಸಬಲೀಕರಣ. ಪ್ರತಿಯೊಬ್ಬರು ತಮ್ಮ ಹಕ್ಕಿಗಾಗಿ ಸಾಮೂಹಿಕವಾಗಿ ಹೋರಾಡಬೇಕಾಗುತ್ತದೆ. ಈ ಸಮೂಹ ಪ್ರಜ್ಞೆ ಮಹಿಳಾ ಚಳುವಳಿಯ ತಳಹದಿಯಾಗಿದೆ. ಮಹಿಳೆಯರ ವಿಭಿನ್ನ ಸಮಸ್ಯೆಗಳನ್ನು ಕಾವ್ಯವಾಗಿ ಕಟ್ಟುತ್ತ ಸಮಾಜದ ಮಹಿಳೆಯರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಅವರು ಇಲ್ಲಿ ಅವರು ಮೊದಲ ಹೆಜ್ಜೆ ಸಾಹಿತ್ಯದ ಮೂಲಕ, ತಮ್ಮ ಪ್ರತಿಭಟನೆಯ ದನಿಗಳನ್ನು ಹೊರ ಹಾಕಿದ ಲೇಖಕಿಯರು ಕಾವ್ಯ, ಕಥೆ, ಕಾದಂಬರಿ, ನಾಟಕ ಹೀಗೆ ಇತರ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಂಡರು ಎನ್ನುವುದು ವಿಶೇಷ.

ಈ ಲೇಖನದಲ್ಲಿ ಕೆಲವು ಕವಯತ್ರಿಯರ ಕಾವ್ಯಗಳನ್ನು ಇಲ್ಲಿ ಗಮನಿಸಬಹುದು.

**ಶೈಲಜಾ ಉಡಚಣರವರ 'ರಮ್ಯ'ದ ಒಂದು ಪದ್ಯದಲ್ಲಿ**
**'ರಮ್ಯವಿರಲಿ ನವ್ಯ ಬರಲಿ। ಅತಿ ನವ್ಯ ಹಾದಿಯಿರಲಿ**
**ನಮಗಂತೂ ಬೆಲೆ ಬೇಕು। ನಾಣ್ಯಯಾವುದಾದರೇನು'**

ಸ್ತ್ರೀವಾದಿ ಧ್ವನಿಯ ಮೊಟ್ಟ ಮೊದಲ ಅಧಿಕೃತದನಿಯಾಗಿದೆ. ಅವರ ಚಿಟುಕು ಕಾವ್ಯದಲ್ಲಿ

**"ಅಂದು ಇತ್ತು। ಹಲವರತುತ್ತನುಂಡು। ತೃಪ್ತಿಗೊಳ್ಳುವ ಮನಸ್ಸು**
**ಇಂದು ಬೆಳೆದು। ನನಗೆ ನಾನೆ ನಿರ್ಮಿಸಬೇಕು**
**ನನ್ನ ಲೋಕದ ಕನಸು"**

ಇಂತಹ ಕಾವ್ಯದಿಂದ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರು ತಮ್ಮದೇ ಆದ ದನಿಯನ್ನು ರೂಪಿಸಿಕೊಳ್ಳುವ ಆರಂಭದ ಹೆಜ್ಜೆ ಗುರುತುಗಳು ಇವು.

ಕನ್ನಡ ಮಹಿಳಾ ಸಾಹಿತ್ಯದಲ್ಲಿ ಮುಖ್ಯವಾಗಿ ಪುರುಷ ಕೇಂದ್ರಿತ ಎಲ್ಲಾ ದಬ್ಬಾಳಿಕೆಗಳಿಗೆ ಪ್ರತಿರೋಧದ ಮೂಲಕ ಸ್ಪಷ್ಟ ಅರಿವು ಮೂಡಿಸುವಯತ್ನ. ಹಾಗೆಯೇ ಲೈಂಗಿಕ ರಾಜಕಾರಣ ಹಾಗೂ ವರ್ಗ ರಾಜಕಾರಣಗಳು ಹೇಗೆ ಮಹಿಳೆಯರ ಶೋಷಣೆಗೆ ಕಾರಣವಾಗಿದೆ ಎಂಬುದರ ಹುಡುಕಾಟ, ಜಾತಿ ವರ್ಗ, ಉಳಿಗಮಾನ್ಯ ಪದ್ಧತಿಗಳ ವಿರೋಧ, ವೈಭವೀಕೃತ ಪರಂಪರೆಯ ವಿರುದ್ಧ ಸಂಶಯ, ಅನುಮಾನ, ಅದರ ಧ್ವಂಸಕ್ಕೆ ಉತ್ಸಾಹ ಪ್ರಕಟಣೆ ತಮ್ಮದೇ ಆದ ಸ್ತ್ರೀವಾದಿ ಮೀಮಾಂಸೆಯ ಪುನರ್‌ರಚನೆ. ಪ್ರತೀಕಪಂಠಜಜಟಗಳ ನಿರ್ಮಾಣ.ಶೋಷಣೆಗೊಳಗಾಗುತ್ತಿರುವ ಮಹಿಳೆ ಬಿಡುಗಡೆಯಾದರೆ ಮಾತ್ರಜಗತ್ತಿನಲ್ಲಿ ಬಿಡುಗಡೆ ಸಾಧ್ಯ ಎಂಬ ನಂಬುಗೆಗಳು ಎಲ್ಲಾ ಮಹಿಳಾ ಸಾಹಿತ್ಯ ಲೋಕದಲ್ಲಿಅವರ ಬರವಣಿಗೆಯಲ್ಲಿಕಾಣಲು ಸಾಧ್ಯವಾಗುತ್ತಿದೆ. ಪ್ರಮುಖವಾಗಿ ಚ. ಸರ್ವಮಂಗಳರವರ 'ತಡೆ'ಎನ್ನುವ ಕವನ

**ಅಮ್ಮಾ**
**ಸಾಕುಮಾಡೆ ನಿನ್ನ ಪುರಾಣ**
**ಆಲದ ಮರದ ನೆರಳಲ್ಲಿ ಬೆಳೆದು**
**ಮಾಸಿದ ಗೋಡೆಗಳ ನಡುವೆ**
**ಬಿಚ್ಚಿಡಬೇಕೆನಮ್ಮಾ ನನ್ನೆದೆಯಗೂಡ!**
**ಅರ್ಥಂಬರ್ಥ ಸರಳು ಕಿತ್ತಕಿಟಕಿ**
**ಅದನ್ನೆ ಹಿಡಿದು ಮುರಿದು ಬಾಗಿಲತ್ತ**
**ಹಾಯಿಸಬೇಕೇನಮ್ಮಾ ನನ್ನಕಣ್ಣ**
**....... ಏನೇ ಹೇಳು**
**ತೊಡೆ ಸಂಧಿಯಲ್ಲಿ ಬದುಕು ಹುದುಗಿಸಿ**
**ಬದುಕಲಾರೆ: ನೀನು ಅಜ್ಜಿ ಸುತ್ತಿದ**
**ವರ್ತುಲದಲ್ಲೇ ಸುತ್ತಲಾರೆ, ಕುತ್ತಿಗೆಗೊಂದು**
**ಬಿಗಿದು ಹಿಡಿಯಬೇಡಅಮ್ಮಾ......"**

ಇಲ್ಲಿ 'ಅಮ್ಮ'–'ಆಲ'ವಾಗಿರುವ 'ಪುರಾಣ'ವಾಗಿರುವ ಇಡೀಯಾಗಿ ಪರಂಪರೆಯಾಗಿರುವ ಚಿತ್ರವಿದೆ.

**ಹಾಗೆಯೇ ಸುಕನ್ಯಾ ಮಾರುತಿಯವರ 'ಬಿದ್ದವಳು'ಕವಿತೆಯಲ್ಲಿ**
**ಕಲಿತ ಅಷ್ಟಷ್ಟು ವಿದ್ಯೆಯನೆಲ್ಲ| ಅಡಿಗೆ ಮನೆಯ**
**ಜಂತಿ ಎಣಿಸುವುದಕ್ಕೆ ಬಳಸಿದ್ದೇನೆ**
**ಅವ ಬಿತ್ತಿದ್ದನ್ನ ನಾ ಬೆಳೆಯುತ್ತ**
**ಕಾಲ ಕಳೆಯುತ್ತಿದ್ದೇನೆ**
**ನನ್ನೊಳಗೆ ಎಲ್ಲೊ ಕಳೆದಿರುವ 'ನನ್ನ ಹುಡುಕತಲಿದ್ದೇನೆ'**

ಪ್ರಮುಖವಾಗಿ ಇಲ್ಲಿ ಹೆಣ್ಣು ತನ್ನ ಶಕ್ತಿ–ಸಾಮರ್ಥ್ಯಗಳನ್ನೆಲ್ಲ ಅನ್ಯರ ಉದ್ಧಾರ ಮತ್ತು ಸೇವೆಗೆ ಮೀಸಲೀಡುವ ವ್ಯವಸ್ಥೆ ಇರುವಕಾರಣಕ್ಕಾಗಿ 'ಆಕೆಯ' ಅರಿವು 'ಆಕೆಗೆ' ಆಗದ ಸ್ಥಿತಿ ನಿರ್ಮಾಣವಾಗಿರುವುದನ್ನು ಎತ್ತಿ ತೋರಿಸುತ್ತದೆ.

ಹೆಣ್ಣನ್ನು ಒಂದು ಸ್ವತ್ತನ್ನಾಗಿ ಪರಿವರ್ತಿಸಿ, ಅದನ್ನೊಂದು ಬಳಕೆಯ ವಸ್ತುವನ್ನಾಗಿ ನೋಡಿದ್ದರೆ ಬಗ್ಗೆ ಆಕ್ರೋಶಿತ ದನಿಯು ಪುರುಷನನ್ನು ಪ್ರಶ್ನಿಸುತ್ತದೆ. ಇದೇ ಬಗೆಯದನಿ ಆಶಯ ಹೊಂದಿರುವ ಕವಿತೆಗಳು ಹಲವಾರು ಅದರಲ್ಲಿ ಕೆಲವು.

೧. **ಶಕುಂತಲಾ ನಂಬಿಸಿ, ಮಜಾ ಮಾಡಿ**
**ಮತ್ತೆ ಕೈಕೊಟ್ಟ**
**ದುಷ್ಯಂತ ತಿರುಗಿ ಬಂದಾಗ**
**ನೀನೂ ಒಂದು ಶಾಪ ಕೊಡಬಾರದಿತ್ತೆ?**
**–ಭಾಗ್ಯ (ಸುಳ್ಳಿನಾಚೆಯ ಸತ್ಯ)**

೨. ದಾವಿಸಿ ಬಂದ ದುಷ್ಯಂತ
ದೂರ್ವಾಸನ ಶಾಪ, ಉಂಗುರದ ನೆಪ
ಒಡ್ಡಿ ನಿಂತವನ ನೋಡಿ ನಕ್ಕಳು
(ನೋವುಂಡ ನಕ್ಕ ನಗೆಯಲ್ಲ)
ಚಿಗುರ ಬೆರಳಿಗೆ ಮತ್ತೆಉಂಗುರದ ಸಂಭ್ರಮ
ಹಿಮಗಟ್ಟಿದ ಹುಡುಗಿ ಅಲ್ಲಲ್ಲ ಪ್ರೌಢ
ಥಣ್ಣಗೆ ನುಡಿದಳು । ನನಗೆ ಉಂಗುರದಲ್ಲಿ ನೆಚ್ಚಿಗೆಂಬಲ್ಲ"
–ಎಂ. ಆರ್. ಕಮಲ (ಶಕುಂತಲೋಪಾಖ್ಯಾನ)

೩. ಸುಂದರತಾಜ ಮಹಲೇ
ನಿನ್ನ ಹಕೀಕತ್ತುಏನೆಂದು
ಎಲ್ಲರಿಗೂಗೊತ್ತು
ನಿನ್ನ ಪ್ರೇಮ ಸ್ಮಾರಕದ
ಮುಸುಕಿನ ಮರೆಯಲ್ಲಿ
ನಿಟ್ಟುಸಿರಿಟ್ಟ ಬೇಗಮ್‌ಗಳೇಷ್ಟೊ!
ತಲೆದಿಂಬಿನಲಿ ಇಂಗಿ ಹೋದ ಕಂಬನಿಗಳೇಷ್ಟೊ?
ಉಕ್ಕಿದ ಹರೆಯ ಬಿಚ್ಚಿಡಲು
ಬಿಕ್ಕಿದ ಜನಾಂಗಗಳೇಷ್ಟೋ......."
(ಮುಮ್ತಾಜಳ ಅಳಲು) ಕೆ. ಷರೀಫಾ

ಇಂತಹ ನೂರಾರು ಪದ್ಯಗಳು ತಮ್ಮ ಹಕ್ಕು, ಸ್ವಾತಂತ್ರ, ಸಮಾನತೆ, ಗೌರವವನ್ನು ಮಾತ್ರ ಬಯಸುವುದನ್ನು ಕಾಣಬಹುದಾಗಿದೆ.

ಪ್ರಸ್ತುತ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪ್ರಜ್ಞೆಯ ನೆಲೆಯನ್ನು ಅವರ ಕಥೆ, ಕಾದಂಬರಿ, ಕಾವ್ಯದಲ್ಲಿ ಗಟ್ಟಿಗೊಂಡಿದ್ದನ್ನು ಕಾಣಬಹುದು. ಅವರು ತಮ್ಮ ಅಭಿವ್ಯಕ್ತಿಯಲ್ಲಿಯೇ ಸ್ತ್ರೀವಾದಕ್ಕೂ ಅವರು ಹೊಸ ಭಾಷ್ಯ ಬರೆದಿದ್ದಾರೆ. ಅದೆಂದರೆತನ್ನ ಸಮಾನತೆಗೆ, ಸ್ವಾತಂತ್ರ್ಯಕ್ಕೆ ಹೋರಾಡುವ ಸ್ತ್ರೀ ಪುರುಷದ್ವೇಷಿಯಲ್ಲಿ ಪುರುಷನು ಆ ಕಾರಣಕ್ಕೆ ಅವಳನ್ನು ಪುರುಷದ್ವೇಷಿಯೆಂದು ತಿಳಿದರೆ ಅದು ಅವಳ ತಪ್ಪಲ್ಲ. ತಪ್ಪು ಪುರುಷನದೇ.ಸ್ತ್ರೀ ಬಯಸುವುದು ಬರಿ ಸ್ವಾತಂತ್ರ್ಯ ಮತ್ತು ಸಮಾನತೆ, ಪುರುಷನೊಂದಿಗೆ ಸರಿಸಮನಾಗಿ ನಿಂತು ಅವನೊಂದಿಗೆ ಸಮ ಹೆಜ್ಜೆ ಹಾಕುವ ಗಟ್ಟಿದನಿಯನ್ನು ಕೇಳುವುದು ಇತ್ತೀಚಿನ ಕನ್ನಡ ಕವಯತ್ರಿಯರ ಸಾಹಿತ್ಯದಲ್ಲೆ ಎಂಬುದು ಸಾರ್ವತ್ರಿಕ ಸತ್ಯವಾಗಿದೆ.

## ಪರಾಮರ್ಶನ ಗ್ರಂಥಗಳು

೧. ಸ್ತ್ರೀವಾದಿ ವಿಮರ್ಶೆ–ಡಾ. ಸಿ.ಆರ್. ಯರವಿನತೆಲಮಠ, ಕಣ್ವ ಪಬ್ಲಿಕೇಶನ, ಬೆಂಗಳೂರು, ಪ್ರ.ವ–೨೦೧೮.
೨. ದಲಿತ–ಬಂಡಾಯ ಕಾವ್ಯ ಮತ್ತು ವಿಚಾರವಾದಗಳು –ಡಾ. ಪ್ರಹ್ಲಾದ ಅಗಸನಕಟ್ಟಿ, ಹರ್ಷ ಪ್ರಕಾಶನ ಹುಬ್ಬಳ್ಳಿ, ಪ್ರ.ವ–೨೦೦೪.
೩. ಮಹಿಳಾ ಸಾಹಿತ್ಯ– ಡಾ. ಸಬೀಹಾ ಭೂಮಿಗೌಡ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪ್ರ.ವ–೨೦೦೬.